# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1260
2) ಸದಸ್ಯರ ಹೆಸರು : ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 17-12-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆ ಯಿಂದ ಒಟ್ಟು ಎಷ್ಟು ಕೆರೆಗಳನ್ನು ಹರಾಜು ಮಾಡಿ ಮೀನುಗಾರಿಕೆ ಮಾಡಲು ಅನುಮತಿ ನೀಡಲಾಗಿದೆ; (ಜಿಲ್ಲಾವಾರು ಕೆರೆಗಳ ವಿವರ ನೀಡುವುದು) | ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಹರಾಜು ಮಾಡಿ ಮೀನುಗಾರಿಕೆ ಮಾಡಲು ಅನುಮತಿ ನೀಡಲಾದ ಜಿಲ್ಲಾವಾರು ಕೆರೆಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಆ) | ಈ ಹರಾಜು ಪ್ರಕ್ರಿಯೆಯಲ್ಲಿ ಇಲಾಖೆಗೆ ಪ್ರತಿವರ್ಷ ಎಷ್ಟು ಹಣ ಸಂದಾಯವಾಗುತ್ತದೆ; | ಈ ಹರಾಜು ಪ್ರಕ್ರಿಯೆಯಿಂದ 2025-26ನೇ ಸಾಲಿನಲ್ಲಿ ರೂ.20.74 ಕೋಟಿ ಮೊತ್ತ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗಿರುತ್ತದೆ. |
| ಇ) | ಒಳನಾಡಿನ ಪ್ರದೇಶಗಳಲ್ಲಿ ಎಷ್ಟು ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಅನುಕೂಲ ಮಾಡಿ ಕೊಡಲಾಗಿದೆ; | ಒಳನಾಡು ಪ್ರದೇಶಗಳಲ್ಲಿ 2520 ಕೆರೆಗಳನ್ನು ವಿಲೇವಾರಿ ಮಾಡಿ ಮೀನುಗಾರಿಕೆ ಮಾಡಲು ಗುತ್ತಿಗೆ ಆದೇಶ ನೀಡಲಾಗಿದೆ. |
| ಈ) | ಕಳೆದ ಎರಡು ವರ್ಷಗಳಲ್ಲಿ ಮೀನುಗಾರಿಕೆಯಿಂದ ಸರ್ಕಾರಕ್ಕೆ ಎಷ್ಟು ಆದಾಯವಾಗಿದೆ; | ಕಳೆದ ಎರಡು ವರ್ಷಗಳಲ್ಲಿ ಮೀನುಗಾರಿಕೆಯಿಂದ ಸರ್ಕಾರಕ್ಕೆ ಬಂದ ಆದಾಯದ ವಿವರ<br>ವರ್ಷ: 2023-24 / 2024-25<br>ಆದಾಯ (ರೂ.ಕೋಟಿ ಗಳಲ್ಲಿ): 20.98 / 20.16 |
| ಉ) | ಗ್ರಾಮ ಪಂಚಾಯಿತಿಗಳಲ್ಲಿ ಕೆರೆಗಳನ್ನು ಮೀನುಗಾರಿಕೆ ಮಾಡಲು ನೀಡಲಾಗುತ್ತಿದೆಯೇ; ಹರಾಜಿನಿಂದ ಬಂದ ಹಣವನ್ನು ಗ್ರಾಮ ಪಂಚಾಯಿತಿ ಏನು ಮಾಡುತ್ತದೆ; | ಗ್ರಾಮೀಣ ಪ್ರದೇಶಗಳಲ್ಲಿ ಮೀನು ಕೃಷಿಯು ಒಂದು ಉಪ ಕಸುಬಾಗಿದ್ದು, ಗ್ರಾಮೀಣ ಜನರಿಗೆ ಉದ್ಯೋಗ ಅವಕಾಶ ಒದಗಿಸುವಲ್ಲಿ ಮತ್ತು ಆದಾಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆಯಲ್ಲದೆ ಅಗ್ಗದ ದರದಲ್ಲಿ ಉತ್ತಮ ಪ್ರೋಟೀನ್ ಯುಕ್ತ ಆಹಾರ ದೊರೆಯುತ್ತದೆ. 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶವುಳ್ಳ ಕೆರೆಗಳು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿರುತ್ತವೆ.<br><br>ಈ ಪೈಕಿ ಗ್ರಾಮ ಪಂಚಾಯತಿ ವ್ಯಾಪ್ತಿಯ 10 ಹೆಕ್ಟೇರ್‌ಗಿಂತ ಕಡಿಮೆ ಜಲ ವಿಸ್ತೀರ್ಣವಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು / ಕಟ್ಟೆಗಳು / ಕೊಳ / ಜಲಾವೃತ ಪ್ರದೇಶಗಳು / ಜಲ ವಿನ್ಯಾಸಗಳನ್ನು ಗ್ರಾಮ ಪಂಚಾಯಿತಿಗಳಿಂದ ಗ್ರಾಮ ಪಂಚಾಯಿತಿ ಒಕ್ಕೂಟಗಳಿಗೆ ಗುತ್ತಿಗೆ ಮೇಲೆ ನೀಡಲಾಗುತ್ತದೆ.<br><br>10 ಹೆಕ್ಟೇರ್‌ಗಿಂತ ಮೇಲ್ಪಟ್ಟು ಹಾಗೂ 40 ಹೆಕ್ಟೇರ್‌ಗಿಂತ ಒಳಗೆ ಇರುವ ಅಚ್ಚುಕಟ್ಟು ಪ್ರದೇಶವುಳ್ಳ ಕೆರೆಗಳನ್ನು ಗ್ರಾಮ ಪಂಚಾಯಿತಿಗಳು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುತ್ತವೆ. ಅದರಿಂದ ಬಂದಂತಹ ಹಣವು ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲವಾಗಿದ್ದು, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗುತ್ತದೆ. |

| | | |
|---|---|---|
| ಊ | ಬರಗಾಲ ಬಂದಾಗ ಮೀನುಗಾರಿಕೆಗೆ ನೀಡಿದ ಕೆರೆಗಳಲ್ಲಿ ರೈತರು ನೀರನ್ನು ಬಳಸಬಹುದೇ ಅಥವಾ ಮೀನುಗಾರಿಕೆಗೆ ನೀಡಲಾಗಿದೆ ಎಂದು ರೈತರಿಗೆ ಬಳಸಲು ಬಿಡುವುದಿಲ್ಲವೇ? | ಬರಗಾಲ ಬಂದಾಗ ಮೀನುಗಾರಿಕೆಗೆ ನೀಡಿದ ಕೆರೆಗಳಲ್ಲಿ ರೈತರು ನೀರನ್ನು ಬಳಸುತ್ತಿರುತ್ತಾರೆ. |

ಸಂಖ್ಯೆ: ಪಸಂಮೀ ಇ-210 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1260 ಕ್ಕೆ

## ಅನುಬಂಧ

### ಶ್ರೀ ಕೆ.ಎಸ್.ನವೀನ್ (ವಿಧಾನ ಪರಿಷತ್ತು) ರವರ ಗುರುತಿಲ್ಲದ ಪ್ರಶ್ನೆ ಸಂಖ್ಯೆ-1260

**ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯಿಂದ 2025-26ನೇ ಸಾಲಿನಲ್ಲಿ ಹರಾಜು ಮಾಡಿ ಮೀನುಗಾರಿಕೆ ಮಾಡಲು ಅನುಮತಿ ನೀಡಲಾದ ಜಿಲ್ಲಾವಾರು ಕೆರೆಗಳ ವಿವರ (ರೂ.ಲಕ್ಷಗಳಲ್ಲಿ)**

| ಕ್ರ.ಸಂ | ಜಿಲ್ಲೆ | ಗುತ್ತಿಗೆ ನೀಡಿದ ಕೆರೆಗಳ ಸಂಖ್ಯೆ | ಆದಾಯ | ಇ-ಟೆಂಡರ್ ಮಾಡಿದ ಕೆರೆಗಳ ಸಂಖ್ಯೆ | ಆದಾಯ |
|---|---|---|---|---|---|
| 1 | ಬೆಂಗಳೂರು (ಗ್ರಾ) | 8 | 4.78 | 41 | 68.25 |
| 2 | ಬೆಂಗಳೂರು (ನಗರ) | 94 | 23.95 | 55 | 90.1 |
| 3 | ಚಿಕ್ಕಬಳ್ಳಾಪುರ | 17 | 6.33 | 59 | 78.95 |
| 4 | ಕೋಲಾರ | 11 | 26.23 | 43 | 38.56 |
| 5 | ರಾಮನಗರ | 21 | 6.96 | 42 | 32.92 |
| 6 | ತುಮಕೂರು | 53 | 39.033 | 226 | 301.83 |
| 7 | ಶಿವಮೊಗ್ಗ | 35 | 12.52 | 250 | 104.46 |
| 8 | ಚಿಕ್ಕಮಗಳೂರು | 16 | 61.88 | 82 | 56.24 |
| 9 | ಚಿತ್ರದುರ್ಗ | 19 | 9.78 | 64 | 171.1 |
| 10 | ದಾವಣಗೆರೆ | 34 | 5.06 | 19 | 20.86 |
| 11 | ಬೆಳಗಾವಿ | 30 | 2.95 | 87 | 19.21 |
| 12 | ಬಿಜಾಪುರ | 20 | 2.61 | 36 | 17.8 |
| 13 | ಧಾರವಾಡ | 18 | 1.88 | 83 | 42.83 |
| 14 | ಗದಗ | 8 | 1.67 | 10 | 2.11 |
| 15 | ಹಾವೇರಿ | 53 | 7.34 | 133 | 86.27 |
| 16 | ಬಾಗಲಕೋಟೆ | 27 | 5.42 | 6 | 1.89 |
| 17 | ಮೈಸೂರು | 39 | 14.53 | 50 | 59.79 |
| 18 | ಹಾಸನ | 21 | 5.64 | 109 | 66.67 |
| 19 | ಕೊಡಗು | 1 | 3.79 | 8 | 6.8 |
| 20 | ಮಂಡ್ಯ | 32 | 23.14 | 57 | 97.96 |
| 21 | ಚಾಮರಾಜನಗರ | 23 | 6.86 | 31 | 29.59 |
| 22 | ಬಳ್ಳಾರಿ | 6 | 1.07 | 14 | 125.43 |
| 23 | ಬೀದರ್ | 33 | 4.3 | 35 | 20.09 |
| 24 | ರಾಯಚೂರು | 28 | 16.23 | 29 | 35.39 |
| 25 | ಗುಲ್ಬರ್ಗಾ | 30 | 4.39 | 44 | 41.56 |
| 26 | ಯಾದಗಿರಿ | 12 | 7.37 | 41 | 48.78 |
| 27 | ಕೊಪ್ಪಳ | 20 | 3.96 | 26 | 12.3 |
| 28 | ವಿಜಯನಗರ | 26 | 8.84 | 28 | 59.12 |
| 29 | ಉತ್ತರ ಕನ್ನಡ | 15 | 1.67 | 62 | 16.97 |
| 30 | ದಕ್ಷಿಣ ಕನ್ನಡ | 0 | 0 | 0 | 0 |
| 31 | ಉಡುಪಿ | 0 | 0 | 0 | 0 |
| | ಒಟ್ಟು | **750** | **320.183** | **1770** | **1753.83** |

ಮೀನುಗಾರಿಕೆ ನಿರ್ದೇಶಕರು